## ಫಲ ನೀಡದ ಹಳೆಯ ಅಸ್ತ್ರ

ಬಹುತೇಕ ಬೌಲರ್‌ಗಳು ಪವರ್ ಪ್ಲೇ ಸಂದರ್ಭದಲ್ಲಿ ಯಾರ್ಕರ್‌ಗಳನ್ನು ಹೆಚ್ಚಾಗಿ ಪ್ರಯೋಗಿಸುತ್ತಿದ್ದರು. ಕಡಿಮೆ ವೇಗದ ಲೋ ಫುಲ್‌ಟಾಸ್ ಹಾಕಿ ಬ್ಯಾಟ್ಸ್‌ಮನ್ ಕಂಗೆಡುವಂತೆ ಮಾಡುವ ತಂತ್ರ ಒಪ್ಪಿಕೊಂಡಿದ್ದರು. ಈ ಋತುವಿನಲ್ಲಿ ಆ ಯಾವುದೇ ಅಸ್ತ್ರ ಸತ್ಫಲ ನೀಡಿಲ್ಲ. ಮುಂಬೈ ಇಂಡಿಯನ್ಸ್ ತಂಡದ ಜಸ್‌ಪ್ರೀತ್ ಬೂಮ್ರಾ ಹಾಕಿದ ಮೊದಲ ಫುಲ್ಲರ್‌ಲೆಂಗ್ತ್ ಎಸೆತವನ್ನು ವೈಭವ್ ಸಿಕ್ಸರ್‌ಗೆ ಅಟ್ಟಿದ್ದರು. ಆ ಎಸೆತದ ವೇಗ ಗಂಟೆಗೆ 132.5 ಕಿ.ಮೀ. ಆಗಿತ್ತು. ಸಾಮಾನ್ಯವಾಗಿ ಬೂಮ್ರಾ ಪ್ರಯೋಗಿಸುವ ವೇಗವನ್ನು ಕಡಿತಗೊಳಿಸಿದ ಅಸ್ತ್ರ ಅದು. ಆದರೆ, ಅದಕ್ಕೂ ವೈಭವ್ ಗೌರವ ನೀಡಿ ತಲೆ ತಗ್ಗಿಸಿ ಆಡಲಿಲ್ಲ. ಪವರ್ ಪ್ಲೇನಲ್ಲಿ ಸ್ಫೋಟಿಸಲೆಂದೇ ಇಂತಹ ಬ್ಯಾಟರ್‌ಗಳಿಗೆ ಈಗ ತರಬೇತಿ ನೀಡಲಾಗುತ್ತಿದೆ. ಜೋಫ್ರಾ ಆರ್ಚರ್ ಅವರಂತಹ ಪರಮ ವೇಗದ ಬೌಲರ್ ಹಾಕುವ ಎಸೆತಗಳಿಗೆ ನೆಟ್ಸ್‌ನಲ್ಲಿ ತಯಾರಾಗುವ ವೈಭವ್ ರೀತಿಯ ನಿರ್ಭೀತ ಹುಡುಗರಿಗೆ ವೇಗ ವೈವಿಧ್ಯ ಈಗ ಲೆಕ್ಕಕ್ಕೇ ಇಲ್ಲ ಎಂಬಂತಾಗಿದೆ.

ಒಂದು ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡದ ಆರಂಭಿಕ ಆಟಗಾರ ಸಾಯಿ ಸುದರ್ಶನ್ ಅವರು ಆರ್‌ಆರ್ ತಂಡದ ಜೋಫ್ರಾ ಹಾಕಿದ ಫುಲ್‌ಟಾಸ್ ಎಸೆತಕ್ಕೆ ಬ್ಯಾಟನ್ನು ಎತ್ತಿ ಹಿಡಿದರಷ್ಟೆ. ಎಸೆತದ ವೇಗದಿಂದಾಗಿಯೇ ಅದು ಸಿಕ್ಸರ್‌ಗೆ ಹೋಯಿತು. ಇದು ಒಂದು ಬಗೆಯಲ್ಲಿ 'ಕ್ಲಾಸಿಕ್' ಬ್ಯಾಟಿಂಗ್ ಶೈಲಿ. ಶುಭಮನ್ ಗಿಲ್, ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ತರಹದ ಹಳೆಯ ಬ್ಯಾಟರ್‌ಗಳು ಈಗಲೂ ಈ ಮಾದರಿಯ ಪ್ರದರ್ಶನವನ್ನು ಐಪಿಎಲ್‌ನಲ್ಲಿ ಉಳಿಸಿಕೊಂಡಿದ್ದಾರೆ. ಇನ್ನೊಂದು ಬದಿಯಲ್ಲಿ ಅಂಥವರಿಗೆ ದಾಳಿಕೋರ ಬ್ಯಾಟ್ಸ್‌ಮನ್‌ಗಳು ಜೊತೆಯಾಗುತ್ತಿದ್ದಾರೆ. ಆರ್‌ಆರ್ ತಂಡದ ಪಾಲಿಗೆ ವೈಭವ್ ವರದಾನವಾದರೆ, ಯಶಸ್ವಿ ಜೈಸ್ವಾಲ್ ಬೋನಸ್ ಇದ್ದಂತೆ. ಎಸ್‌ಆರ್‌ಎಚ್‌ಗೆ ಅಭಿಷೇಕ್ ಶರ್ಮಾ ಬೆಂಕಿಯಾದರೆ, ಟ್ರಾವಿಸ್ ಹೆಡ್ ಗಾಳಿ. ಪಂಜಾಬ್ ಕಿಂಗ್ಸ್ ತಂಡವು ಪ್ರಭಸಿಮ್ರನ್ ಸಿಂಗ್ ಹಾಗೂ ಪ್ರಿಯಾಂಶ್ ಅವರಂಥ ಯುವಬಲವನ್ನೇ ನೆಚ್ಚಿಕೊಂಡಿದೆ.

ಹೆಚ್ಚು ಜನಪ್ರಿಯ ತಂಡವೆನಿಸಿಕೊಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಒಂದು ರೀತಿಯಲ್ಲಿ ಕ್ಲಾಸಿಕ್ ಹಾಗೂ ದಾಳಿಕೋರತನದ ಆಟವನ್ನು ಹದವರಿತಂತೆ ಮಿಶ್ರಣ ಮಾಡಿಕೊಂಡಿರುವ ತಂಡ. ಸಾಲ್ಟ್ ಸಿಕ್ಸರ್ ಎತ್ತುತ್ತಿರುವಾಗ, ಕೊಹ್ಲಿ ಬೌಂಡರಿಗಳ ಮಳೆಗರೆಯಬಲ್ಲರು. ದೇವದತ್ತ ಪಡಿಕ್ಕಲ್ ದೇಸಿ ಕ್ರಿಕೆಟ್‌ನ ಲಯವನ್ನು ಮುಂದುವರಿಸುವಂತೆ 'ಕಾಪಿ ಬುಕ್' ಹೊಡೆತಗಳನ್ನು ಪ್ರದರ್ಶಿಸುವಾಗಲೇ ತಂಡದ ನಾಯಕ ರಹತ್ ಪಾಟೀದಾರ್ ಧ್ವಂಸ ಮಾಡಿಬಿಡಬಲ್ಲರು. ಕೊನೆಯಲ್ಲಿ ಟಿಮ್‌ಡೇವಿಡ್, ರೊಮಾರಿಯೋ ಶೆಫರ್ಡ್ ಕೂಡ ಎದುರಾಳಿ ಬೌಲರ್‌ಗಳಿಗೆ ಮುಟ್ಟಿ ನೋಡಿಕೊಳ್ಳುವಂತಹ ಪೆಟ್ಟು ನೀಡಬಲ್ಲರು. ಮುಂಬೈ ಇಂಡಿಯನ್ಸ್ ತಂಡದ ರೋಹಿತ್ ಶರ್ಮಾ ಹಾಗೂ ರಿಕಲ್ಟನ್ ಜೋಡಿಯನ್ನಾಗಲೀ, ಲಖನೌ ಸೂಪರ್‌ಜೈಂಟ್ಸ್‌ನ (ಎಲ್‌ಎಸ್‌ಜಿ) ಮಿಶೆಲ್ ಮಾರ್ಷ್, ಮರ್ಕ್ರಂ ಅವರನ್ನಾಗಲೀ ಉಪೇಕ್ಷಿಸಲು ಸಾಧ್ಯವಿಲ್ಲ. ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಕೆ.ಎಲ್. ರಾಹುಲ್ ಎಂಬ 'ಕ್ಲಾಸಿಕ್ ದಾಳಿಕೋರ'ನ ಅನುಭವವೂ ಇದೆಯೆನ್ನಿ.

## ಮುರಿದ ಹಳೆಯ ತಂತ್ರ

ಕಪಿಲ್‌ದೇವ್ ಒಂದೊಮ್ಮೆ ಹೇಳಿದ್ದರು: 'ನಮಗೆ ಬ್ಯಾಟಿಂಗ್ ಕಲಿಸುತ್ತಿದ್ದ ತರಬೇತುದಾರರು ಚೆಂಡನ್ನು ಕವರ್ಸ್ ಅಥವಾ ಪಾಯಿಂಟ್ ತಲೆ ಮೇಲೆ ಹೊಡೆಯಲು ಹೋದರೆ, ನಮ್ಮ ತಲೆಗೆ ಮೊಟಕುತ್ತಿದ್ದರು. ಅದು ಕ್ರಿಕೆಟ್‌ನ ಶಾಸ್ತ್ರೀಯತೆಗೆ ಭಂಗ ತರುವ ಕೆಟ್ಟ ಹೊಡೆತ ಆಗಿತ್ತು. ನಾನು ವೀಕ್ಷಕ ವಿವರಣೆ ನೀಡುವ ಹೊತ್ತಿಗೆ ಸನತ್ ಜಯಸೂರ್ಯ, ವೀರೇಂದ್ರ ಸೆಹ್ವಾಗ್ ಇಬ್ಬರೂ ಪಾಯಿಂಟ್, ಕವರ್ಸ್ ತಲೆ ಮೇಲೆ ಹೊಡೆಯುವುದನ್ನೇ ಸಿಗ್ನೇಚರ್ ಶಾಟ್ ಮಾಡಿಕೊಂಡರು. ಕಾಲಾಯ ತಸ್ಮೈ ನಮಃ' ಐಪಿಎಲ್‌ನಲ್ಲಿ ಈ ಮಾತು ಅಕ್ಷರಶಃ ಸತ್ಯವಾಗುತ್ತಿದೆ.

ದಶಕದ ಹಿಂದೆ ದೊಡ್ಡ ಹೊಡೆತ ಹೊಡೆಯಲು ಮುನ್ನುಗ್ಗುವುದು ಸಹಜವಾಗಿತ್ತು. ಈಗ ಬ್ಯಾಟರ್‌ಗಳು ಬ್ಯಾಕ್‌ಫುಟ್‌ನಲ್ಲಿಯೇ ಚೆಂಡನ್ನು ದೂರ ಬಹುದೂರ ಹೊಡೆದಟ್ಟುವ ಶಾಣ್ಯಾತನವನ್ನು ರೂಢಿಸಿಕೊಂಡಿದ್ದಾರೆ. ಆಫ್‌ಸ್ಟಂಪ್‌ನಿಂದ ಸಾಕಷ್ಟು ಆಚೆಗೆ ಹಾಕುವ ಎಸೆತಗಳನ್ನು ಸಿಕ್ಸರ್‌ಗೆ ಹೊಡೆಯಲು ಬ್ಯಾಟನ್ನು ಹಿಡಿಯುವ ಕ್ರಮವನ್ನೂ ಕಲಿತುಕೊಂಡಿದ್ದಾರೆ. ಗುಡ್‌ಲೆಂಗ್ತ್ ಎಸೆತಗಳಾಗಲೀ, ವೇಗದ ದಾಳಿಯಾಗಲೀ ಈಗ ಮೊನಚಾಗಿ ಉಳಿದೇ ಇಲ್ಲ.

ಹಾಗೆಂದ ಮಾತ್ರಕ್ಕೆ ಇದು ಎಲ್ಲ ಸ್ವರೂಪದ ಕ್ರಿಕೆಟ್‌ಗೆ ಅನ್ವಯವಾಗುತ್ತದೆ ಎಂದೇನೂ ಭಾವಿಸಬೇಕಿಲ್ಲ. ಪವರ್ ಪ್ಲೇ ಆಡಲು ಮಾತ್ರ ವೈಭವ್, ಅಭಿಷೇಕ್ ತರಹದ ಬಿಸಿರಕ್ತದ ಹುಡುಗರನ್ನು ತಯಾರು ಮಾಡಲಾಗಿದೆ. ಟೆಸ್ಟ್ ಅಥವಾ ಏಕದಿನ ಪಂದ್ಯಗಳು ಬೇಡುವ ಸಾವಧಾನದ ಪಾಠವನ್ನು ಅವರಿನ್ನೂ ಕಲಿಯಬೇಕಿದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಲ್ಲಿ ಆಡಲು ಆಯ್ಕೆಯಾಗುವವರು ಐಪಿಎಲ್ ಅನ್ನು ಚಿಮ್ಮುಹಲಗೆ ಆಗಿಸಿಕೊಳ್ಳುತ್ತಿದ್ದಾರೆ. ಅದರ ಮೇಲೆ ನಿಂತಿರುವ ಬಿಸಿರಕ್ತದ ಹುಡುಗರಿಗೆ ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲೆಂಡ್ ನೆಲದ ಪುಟಿದೇಳುವ ಕೆಂಪು ಚೆಂಡಿನ ಬಿಸಿ ಇನ್ನೂ ಗೊತ್ತಿರಲಿಕ್ಕಿಲ್ಲ. ಇಲ್ಲಿನ ದಾಳಿಕೋರತನವೇ ಅವರ ಕ್ರಿಕೆಟ್ ಬದುಕಿನ ಅವಧಿಯನ್ನು ಸಂಕ್ಷಿಪ್ತಗೊಳಿಸದೇ ಇರಲಿ ಎಂದು ಸದಾಶಯ ಇಟ್ಟುಕೊಳ್ಳೋಣ.

ಸಪಾಟಾದ ಪಿಚ್ ಮೇಲೆ ಬ್ಯಾಟರ್‌ಗಳ ವೈಭವೋಪೇತ ಹೊಡೆತಗಳು, ಅದರಿಂದ ಹರಿದುಬರುವ ದೊಡ್ಡ ಮೊತ್ತದ ಹಣ, ವಹಿವಾಟುಗಳ ಮಹಾಜಾಲ... ಈ ಎಲ್ಲದರ ನಡುವೆ ಬಿಳಿ ಚೆಂಡನ್ನು ಹಿಡಿದು, ಅದಕ್ಕೆ ಮೆತ್ತಿಕೊಂಡ ತೇವಾಂಶವನ್ನು ಒರೆಸುತ್ತಾ ಕಣ್ಣರಳಿಸುವ ಬೌಲರ್‌ಗಳನ್ನು ನೋಡಿದರೆ 'ಅಯ್ಯೋ ಪಾಪ' ಎನಿಸದೇ ಇರದು. ಸದ್ಯಕ್ಕೆ ಐಪಿಎಲ್ ಪಂದ್ಯದ ಹಣೆಬರಹವನ್ನು ಪವರ್ ಪ್ಲೇ ನಿರ್ಧರಿಸುತ್ತಿದೆ ಎಂದಂತೂ ನಿಸ್ಸಂಶಯವಾಗಿ ಹೇಳಬಹುದು.



ಫಿಲ್‌ಸಾಲ್ಟ್